
# ಶ್ರೀ ಕಾಶೀಕ್ಷೇತ್ರ ಪರಿಚಯ




*ಕೃತಿ :* **ಕಾಶಿ ಪುಣ್ಯರಾಶಿ**
*ಲೇಖಕರು :* **ಶ್ರೀಮತಿ ಗಿರಿಜಾದೇವಿ**
*ಪ್ರಕಾಶಕರು :* **ವಿವೇಕಹಂಸ ಪ್ರಕಾಶನ**
**ಬೆಂಗಳೂರು - 560 050**
**ದೂ: 080-2669 6388**

*ಪ್ರತಿಗಳು ದೊರೆಯುವ ಸ್ಥಳ:*
**ರಾಮಕೃಷ್ಣ ಮಿಷನ್ ಆಶ್ರಮ**
**ಕೋಟೆ, ಬೆಳಗಾವಿ - 590016**
**ದೂ: 0831-2432789**

*ಪುಟಗಳು :* **304**
*ಬೆಲೆ :* **200/**

ಭಾರತದುದ್ದಕ್ಕೂ ಕಂಡುಬರುವ ಹತ್ತುಹಲವು ಪುಣ್ಯಕ್ಷೇತ್ರಗಳ ಮಹಿಮೆಯನ್ನು ಗಮನಿಸುತ್ತ ಹೋದರೆ, ಒಂದೊಂದು ಕ್ಷೇತ್ರದ ಹಿನ್ನೆಲೆಯೂ ರೋಚಕವಾದ ಕಥಾನಕಗಳಿಂದ, ಹಲವು ಪೌರಾಣಿಕ ಘಟನೆಗಳಿಂದ, ಎಷ್ಟೋ ಬಗೆಯ ದಂತಕತೆ, ಆಚರಣೆ, ದೈವೀಶಕ್ತಿಯ ಪ್ರತೀತಿಗಳಿಂದ ತುಂಬಿ ತುಳುಕುತ್ತಿರುವುದನ್ನು ನಾವು ಕಾಣುತ್ತೇವೆ. ಇದರೊಂದಿಗೆ ಹಲವು ಮಂದಿ ಸಾಧು-ಸಂತರು, ವಿಭೂತಿ ಪುರುಷರು ಹಾಗೂ ವಿವಿಧ ಸಂಪ್ರದಾಯಗಳಿಗೆ ಸೇರಿದ ಸಾಧಕರು ಈ ಕ್ಷೇತ್ರಗಳೊಂದಿಗೆ ವಿಶಿಷ್ಟವಾದ ಸಂಬಂಧವನ್ನು ಹೊಂದಿರುವುದನ್ನೂ ಗಮನಿಸಬಹುದು. ಇಂತಹ ಹಲವು ಪುಣ್ಯಕ್ಷೇತ್ರಗಳಲ್ಲಿ ಶಿಖರಪ್ರಾಯವಾದದ್ದು ಶ್ರೀ ಕಾಶೀಕ್ಷೇತ್ರ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ವಿಶ್ವನಾಥ, ಅನ್ನಪೂರ್ಣೆಯರು ಅಲ್ಲಿಗೆ ಬರುವ ಭಕ್ತರನ್ನು ಸದಾ ಹರಸುತ್ತಾರೆ, ಮೃತ್ಯುವಿನಿಂದ ಬಿಡುಗಡೆ ಮಾಡುತ್ತಾರೆ ಎಂಬ ನಂಬಿಕೆ ಹಲವರದು. ಅನಾದಿಕಾಲದಿಂದಲೂ ಕಾಶಿ ತನ್ನ ಆಧ್ಯಾತ್ಮಿಕ ತರಂಗಗಳಿಂದ ಭಾರತದ ಆಸ್ತಿಕ ಜನರನ್ನು ತನ್ನೆಡೆಗೆ ಸೆಳೆಯುತ್ತಿದೆ. ಇಂಥ ದಿವ್ಯಕ್ಷೇತ್ರವನ್ನು ಕುರಿತ ವಿಸ್ತಾರವಾದ, ಸಮಗ್ರವಾದ ಹಾಗೂ ಮಾಹಿತಿಪೂರ್ಣವಾದ ಸದ್ಗ್ರಂಥವೊಂದು ಕನ್ನಡದಲ್ಲಿ ಪ್ರಕಟವಾಗಿದೆ: ಶ್ರೀಮತಿ ಗಿರಿಜಾದೇವಿಯವರ 'ಕಾಶಿ ಪುಣ್ಯರಾಶಿ' ಗ್ರಂಥ. ವಿವೇಕಹಂಸ ಪ್ರಕಾಶನದವರು ಪ್ರಕಟಿಸಿರುವ ಈ ಕೃತಿಯುದ್ದಕ್ಕೂ ಹಲವು ಪುರಾಣಗಳಿಂದ ಆಯ್ದ ಕಥಾಭಾಗಗಳು, ವಿವಿಧ ಮಂದಿರಗಳ ವಿಶೇಷತೆಗಳು, ಕೆಲವು ಸಮಕಾಲೀನ ಘಟನೆಗಳು, ಹಲವು ಬಗೆಯ ಪೂಜೆ, ಆಚರಣೆಗಳು ಮುಂತಾದ ವಿವರಗಳು ಬರುತ್ತವೆ. ನಡುನಡುವೆ ಕಂಡುಬರುವ ರೋಚಕವಾದ ನಿರೂಪಣೆ ಓದುಗರಲ್ಲಿ ಉತ್ಸಾಹ ಉಕ್ಕಿಸುತ್ತದೆ.

ಹದಿನೆಂಟು ಅಧ್ಯಾಯಗಳಲ್ಲಿ ವಿಸ್ತೃತವಾಗಿ ವರ್ಣಿತವಾಗಿರುವ ಕಾಶೀಕ್ಷೇತ್ರದ ಮಹಿಮೆಯು, ಹಲವು ಕಾರಣಗಳಿಂದ ಗಮನವನ್ನು ಸೆಳೆಯುತ್ತದೆ. ಕೇವಲ ಮಾಹಿತಿ ನೀಡಿ ಯಾತ್ರಿಕರನ್ನು ಸೆಳೆಯುವ 'ಯಾತ್ರಿಕ ಕೈಪಿಡಿ' ಯಂತಿಲ್ಲದೆ, ಆಸ್ತಿಕ ಜನರಿಗೆ ಶ್ರದ್ಧೆಯನ್ನು ಹೆಚ್ಚಿಸುವಂತೆ ಹತ್ತುಹಲವು ಸಂಗತಿಗಳನ್ನಿಲ್ಲಿ ಸುಂದರವಾಗಿ ಹೆಣೆಯಲಾಗಿದೆ. ಒಂದು ಉದಾಹರಣೆ: ''ಗಂಗಾತೀರದಲ್ಲಿ ಮಾಡುವ ದಾನಕ್ಕೆ ಅಸಂಖ್ಯ ಗುಣಗಳು ವರ್ಣಿತವಾಗಿವೆ. 'ಕಾಶಿಗೆ ಬಂದು ಕಾಸಿನ ಮುಖ ನೋಡುತ್ತಾರೆಯೆ?' ಎನ್ನುವ ಗಾದೆ ಮಾತನ್ನು ನೆನಪಿನಲ್ಲಿರಿಸಬೇಕು. ಕಾಶೀಯಾತ್ರೆಯ ನಿರ್ಧಾರ ಮಾಡಿದೊಡನೆಯೇ ಮನೆಯ ಇತರ ಖರ್ಚುಗಳನ್ನು ಮೊಟಕುಗೊಳಿಸಿ ಸ್ವಲ್ಪ ಹಣ ಉಳಿಸಲು ಪ್ರಯತ್ನಿಸಬೇಕು. ಎಷ್ಟೋ ಮಂದಿಗೆ ಜೀವನದಲ್ಲಿ ಒಮ್ಮೆ ಮಾತ್ರ ಒದಗಿ ಬರುವ ಸಂದರ್ಭ ಈ ಕಾಶೀಯಾತ್ರೆ . ಈ ಆನಂದದಾಯಕ ಶುಭಸಮಯದಲ್ಲಿ ಸಂನ್ಯಾಸಿಗಳ ಕಾಟ, ಪಂಡಾಗಳ ಕೂಗಾಟ, ಭಿಕ್ಷುಕರ ಹಾವಳಿ ಎಂದು ಬೇಸರಿಸಿ ಮನಸ್ಸನ್ನು ಮಲಿನ ಮಾಡಿಕೊಳ್ಳುವುದರಿಂದ ಯಾವ ಪುರುಷಾರ್ಥವನ್ನೂ ಸಾಧಿಸಿದಂತಾಗುವುದಿಲ್ಲ..'' (ಪು. ೮)

ಯಾತ್ರಿಕರಿಗೆ ಉಪಯುಕ್ತವಾಗುವ ಕೆಲವು ಮಾಹಿತಿಗಳು ಇಲ್ಲಿವೆ; ಆದರೆ ಅದಕ್ಕಿಂತ ಮುಖ್ಯವಾಗಿ, ಯಾತ್ರೆ ಮಾಡುವ ಮುನ್ನ ಈ ಕ್ಷೇತ್ರವನ್ನು ಕುರಿತಾಗಿ ಅನೇಕ ಹಿನ್ನೆಲೆಗಳನ್ನು ತಿಳಿದುಕೊಳ್ಳುವುದು ಅಗತ್ಯ . ಬೇರೆಲ್ಲೂ ಲಭ್ಯವಿಲ್ಲದ ಹಲವು ಮಾಹಿತಿಗಳನ್ನು ಇಲ್ಲಿ ಕಲೆಹಾಕಿ, ಸ್ವತಃ ತಾವೇ ನೋಡಿ ತಿಳಿದ ಹಲವು ಸಂಗತಿಗಳನ್ನೂ ಸೇರಿಸಿಕೊಂಡು ಇಲ್ಲಿ ವಿವರಿಸಿರುವುದು ಈ ಕೃತಿಯ ವಿಶೇಷತೆ. ಅಲ್ಲಲ್ಲಿ ಬರುವ ಸ್ತೋತ್ರ , ಮಂತ್ರ , ಕಥೆ, ಘಟನೆಗಳು ಕೃತಿಯನ್ನು ಓದಿಸಿಕೊಂಡು ಹೋಗುವಂತೆ ಮಾಡುತ್ತವೆ. ನಡುನಡುವೆ ಶ್ರೀರಾಮಕೃಷ್ಣ, ಶ್ರೀಮಾತೆ ಹಾಗೂ ಸ್ವಾಮೀಜಿಯವರು ಕಾಶಿಯೊಂದಿಗೆ ಹೊಂದಿದ್ದ ಭಾವತತ್ಪರತೆಯನ್ನು ಸೂಚಿಸುವ ಪ್ರಸಂಗಗಳು ಸ್ಫೂರ್ತಿದಾಯಕವಾಗಿವೆ. ಅನೇಕ ಚಿತ್ರಗಳಿಂದಲೂ ಸುಂದರ ಮುನ್ನುಡಿಯಿಂದಲೂ, ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರ ಆಶೀರ್ವಚನದಿಂದಲೂ ಈ ಕೃತಿ ಸಮೃದ್ಧವಾಗಿದೆ. ಸುಲಭ ಬೆಲೆಗೆ ಲಭ್ಯವಾಗಿರುವ ಈ ಕೃತಿಯನ್ನ ಕಾಶೀದರ್ಶನ ಮಾಡಬಯಸುವವರೆಲ್ಲರೂ ಅತ್ಯಗತ್ಯವಾಗಿ ಓದಬೇಕು. ಲೇಖಕಿ ಸ್ವತಃ ಕಾಶೀಕ್ಷೇತ್ರದ ನಿವಾಸಿಯೇ ಆಗಿರುವುದು ಕೃತಿಯ ಅಧಿಕೃತತೆಯನ್ನು ಹೆಚ್ಚಿಸುತ್ತದೆ.